ವೈದ್ಯಕೀಯ ಕ್ಷೇತ್ರದಲ್ಲಿಯೂ ಬಲೂನುಗಳು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತಿವೆ. ಮಿದುಳಿನ ರಕ್ತನಾಳದಲ್ಲಿನ ರಂಧ್ರವನ್ನು ಮುಚ್ಚಲು ಕೆಲವೇ ಮಿಲಿಮೀಟರ್ ವ್ಯಾಸದ ವಿಶೇಷ ಬಲೂನನ್ನು 'ಕೆಥೀಟರ್' ಎಂಬ ಉಪಕರಣದಿಂದ ಗಾಯದ ಸ್ಥಳಕ್ಕೆ ಸಾಗಿಸಿ ಅಲ್ಲೇ ಗಟ್ಟಿಯಾಗುವಂತೆ ಮಾಡುತ್ತಾರೆ. ಇದೇ ರೀತಿ, ಜಠರದಲ್ಲಿ, ಕರುಳಿನಲ್ಲಿ, ಮೂತ್ರನಾಳಗಳಲ್ಲಿ ಎಲ್ಲೇ ಆಗಲಿ ಅಡೆತಡೆಗಳಿದ್ದರೆ, ಸ್ಟೆಂಟ್‌ಗಳನ್ನು ಅಳವಡಿಸಿ ಅವುಗಳನ್ನು ನಿವಾರಿಸಲು ಬಲೂನುಗಳ ಉಪಯೋಗ ಇತ್ತೀಚೆಗೆ ವ್ಯಾಪಕವಾಗಿದೆ.



ಅಂತರರಾಷ್ಟ್ರೀಯ ಒಪ್ಪಂದಗಳಿವೆ.

ಸುಳಿಗಾಳಿ, ಚಂಡಮಾರುತಗಳ ಅಧ್ಯಯನ ಮಾಡಲು ಬಲೂನಿನಲ್ಲಿ ದ್ರವ ರೂಪದ ಅನಿಲವನ್ನು ತುಂಬಿಸಿ ರಾಕೆಟ್ ಮೂಲಕ ಉಡಾಯಿಸುತ್ತಾರೆ. ಗಮ್ಯ ಸ್ಥಾನವನ್ನು ಅದು ತಲುಪಿದ ನಂತರ ಬಲೂನ್ ತುಂಬಿಕೊಂಡು ಚಂಡಮಾರುತ ಅಥವಾ ಸುಳಿಗಾಳಿಯೊಂದಿಗೇ ಚಲಿಸತೊಡಗುತ್ತದೆ. ಜೊತೆ ಜೊತೆಯಲ್ಲೇ ಭೂಕೇಂದ್ರಕ್ಕೆ ಮಾಹಿತಿಯನ್ನು ರವಾನೆ ಮಾಡುತ್ತದೆ.

ಅನೇಕ ಉಪಯೋಗಗಳಿರುವ ಮತ್ತೊಂದು ರೀತಿಯ ಬಲೂನೆಂದರೆ 'ಬಂಧಿತ ಬಲೂನ್' ಅಥವಾ 'ಟೆದರ್ಡ್ ಬಲೂನ್' (ಗಾಳಿಪಟದಂತೆ ಹಾರಾಡುವ ಬಲೂನ್). ವಿಮಾನದ ಆಕಾರವಿರುವ ಇದರ ಗಾತ್ರ 10ರಿಂದ 15 ಘನ ಮೀಟರ್. ಅನೇಕ ಕಿಲೊಮೀಟರ್ ಎತ್ತರಕ್ಕೆ ಇವನ್ನು ಹಾರಿಸಬಹುದು. ಇದನ್ನು ಅತ್ಯಂತ ಶಕ್ತಿಯುತವಾದ ಹೆಚ್ಚಿನ ಶಾಖವನ್ನು ತಡೆದುಕೊಳ್ಳಬಲ್ಲ ಕೆವ್ಲಾರ್ ಎಂಬ ವಸ್ತುವಿನಿಂದ ತಯಾರಿಸಿರುವ ಹಗ್ಗವನ್ನು ಉಪಯೋಗಿಸಿ ನೆಲಕ್ಕೆ ಬಿಗಿದು ಕಟ್ಟಿರುತ್ತಾರೆ. ಹಗ್ಗದಿಂದ ಕಟ್ಟಿರುವುದರಿಂದ ಬೇಕಾದ ಸ್ಥಳದಲ್ಲಿ ಬೇಕಾದಷ್ಟು ಸಮಯ ಇರಬಹುದು. 25ರಿಂದ 50 ಕೆ.ಜಿ. ಭಾರವನ್ನು ಹೊರಬಲ್ಲದು. ಇಂಥ ಬಲೂನ್‌ಗಳನ್ನು ರಕ್ಷಣಾಪಡೆಗಳಲ್ಲಿ ವೀಕ್ಷಣಾ ವೇದಿಕೆಯನ್ನಾಗಿ ಉಪಯೋಗಿಸುತ್ತಾರೆ. ಇವನ್ನು ಅರಣ್ಯಗಳಲ್ಲಿ ಕಾಳ್ಗಿಚ್ಚು ಮುಂತಾದುವನ್ನು ಗಮನಿಸಲು ಉಪಯೋಗಿಸಬಹುದು.

ಭಾರತದಲ್ಲಿ ವೈಜ್ಞಾನಿಕ ಅಧ್ಯಯನಗಳಿಗಂದೇ ಮೀಸಲಾದ ರಾಷ್ಟ್ರೀಯ ಬಲೂನ್ ಸೌಲಭ್ಯ ಕೇಂದ್ರಗಳನ್ನು ಟಿ.ಐ.ಎಫ್.ಆರ್. ನೋಡಿಕೊಳ್ಳುತ್ತಿದೆ. ಇದು ಪ್ರಪಂಚದಲ್ಲಿನ ಕೆಲವೇ ಅತ್ಯುತ್ತಮ ಕೇಂದ್ರಗಳಲ್ಲೊಂದು ಎಂಬ ಖ್ಯಾತಿಗೆ ಪಾತ್ರವಾಗಿದೆ. ಇತ್ತೀಚೆಗೆ 'ಇಸ್ರೊ' ಸಹಯೋಗದೊಂದಿಗೆ ಬಲೂನೊಂದನ್ನು ಸ್ಟ್ರಾಟೊಸ್ಪಿಯರ್ ಪದರಕ್ಕೆ ಕಳುಹಿಸಿ ನಡೆಸಿದ ಅಧ್ಯಯನಗಳಿಂದ ಮೂರು ಹೊಸ ಬ್ಯಾಕ್ಟೀರಿಯ ಪ್ರಭೇದಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಒಂದಕ್ಕೆ 'ಬ್ಯಾಸಿಲಸ್ ಇಸ್ರೊನೆನ್ಸಿಸ್' ಎಂದು, ಮತ್ತೊಂದಕ್ಕೆ 'ಬ್ಯಾಸಿಲಸ್ ಆರ್ಯಭಟ' ಎಂದು ನಾಮಕರಣ ಮಾಡಲಾಗಿದೆ. ಈ ಪ್ರಯೋಗದ ಪ್ರಮುಖ ಸಂಶೋಧಕರಾಗಿದ್ದವರು ನಮ್ಮ ದೇಶದ ಹೆಸರಾಂತ ವಿಜ್ಞಾನಿಗಳಾದ ಜಯಂತ್ ವಿಷ್ಣು ನಾರ್ಲೀಕರ್, ಪ್ರೊ. ಯು.ಆರ್. ರಾವ್ ಹಾಗೂ ಡಾ. ಪುಷ್ಪ ಎಂ. ಭಾರ್ಗವ ಅವರು.

ಇತ್ತೀಚೆಗೆ ಮೂರು ಸಾವಿರ ಘನ ಮೀ. ಗಾತ್ರದ 57.5 ಕೆ.ಜಿ. ಭಾರದ ಉಪಕರಣಗಳನ್ನು ಹೊತ್ತ ಜಲಜನಕವನ್ನು ತುಂಬಿಸಿದ 500ನೇ ಬಲೂನನ್ನು 25 ಕಿ.ಮೀ. ಎತ್ತರಕ್ಕೆ ಇದೇ ಕೇಂದ್ರದಿಂದ ಯಶಸ್ವಿಯಾಗಿ ಉಡಾಯಿಸಲಾಯಿತು.

## ಭಾರ ಎತ್ತುವ ಬಲೂನ್‌ಗಳು

'ಏರೊಕ್ರೇನ್', 'ಹೆಲಿಸ್ಟಾಟ್', 'ಸ್ಕೈಹುಕ್' ಮುಂತಾದುವನ್ನು 'ಭಾರ ಎತ್ತುವ ಬಲೂನ್‌ಗಳು' ಎನ್ನುತ್ತಾರೆ. ದುರ್ಗಮ ಪ್ರದೇಶಗಳಿಂದ ಮರದ ದಿಮ್ಮಿ ಮತ್ತಿತರ ಸರಕುಗಳ ಸಾಗಣೆಯಲ್ಲಿ ಇವು ತುಂಬ ಉಪಯುಕ್ತ. ಇವಕ್ಕೆ ರಸ್ತೆಗಳ ಅಗತ್ಯವಿಲ್ಲದ ಕಾರಣ ಎಲ್ಲಿಂದ ಎಲ್ಲಿಗೆ ಬೇಕಾದರೂ ಸುಲಭವಾಗಿ ಸಾಗಿಸಬಹುದು. ಔಷಧಿ ಸಿಂಪಡಿಸಲು, ತೆಂಗು ಅಡಿಕೆ ಮುಂತಾದುವನ್ನು ಕೆಡವಲು, ಮರಗಳು ನಿರ್ದಿಷ್ಟ ಎತ್ತರಕ್ಕಿಂತ ಹೆಚ್ಚು ಬೆಳೆದಾಗ ಅವನ್ನು ಕತ್ತರಿಸಲು ಗಗನಚುಂಬಿ ಕಟ್ಟಡ ಅಥವಾ ಎತ್ತರದ ಗೋಪುರಗಳಲ್ಲಿ ದುರಸ್ತಿ ಮಾಡಲು, ಸಾಗರ ತಳದಿಂದ ವಸ್ತುಗಳನ್ನು ಮೇಲೆತ್ತಲು, ಇಂತಹ ಅನೇಕ ಕೆಲಸಗಳಲ್ಲಿ ಬಲೂನುಗಳನ್ನು ಉಪಯೊಗಿಸಲಾಗುತ್ತಿದೆ.

ಬಿಸಿಗಾಳಿ ಬಲೂನ್ ಅಥವಾ ಜಲಜನಕ ತುಂಬಿದ ಬಲೂನ್‌ನಲ್ಲಿ ಕುಳಿತು ಮನರಂಜನೆಗಾಗಿ ಹಾರಾಟ ನಡೆಸುವ ಸಾಹಸ ಕ್ರೀಡೆ ಈಗ ಎಲ್ಲೆಡೆ ಜನಪ್ರಿಯವಾಗಿದೆ. ಇಂದು ಲಭ್ಯವಿರುವ ಅನೇಕ ಸುರಕ್ಷತಾ ಕ್ರಮಗಳಿಂದಾಗಿ ಇದು ಹಿಂದಿನಂತೆ ಅಪಾಯಕಾರಿಯಾಗಿಲ್ಲ. ಹಾಗಾಗಿ ಪ್ರವಾಸಿಗರಿಗೆ ಇದೊಂದು ಪ್ರಮುಖ ಆಕರ್ಷಣೆಯಾಗಿದೆ. 1978ರಲ್ಲೇ ಅಮೆರಿಕದ ಮೂವರು ಬಲೂನ್ ಯಾನಿಗಳು 137 ಗಂಟೆಗಳ ಕಾಲ ಸತತವಾಗಿ ಹಾರಿ ಸುಮಾರು 5000 ಕಿ.ಮೀ. ದೂರವನ್ನು ಕ್ರಮಿಸಿ ಅಟ್ಲಾಂಟಿಕ್ ಸಾಗರವನ್ನು ದಾಟಿದ್ದರು! ಸ್ಟೀವ್ ಫಾಸೆಟ್ ಎಂಬಾತ ಬಲೂನಿನಲ್ಲಿ ಇಡೀ ಪ್ರಪಂಚವನ್ನು 14 ದಿನಗಳಲ್ಲಿ ಸುತ್ತಿ ಬಂದಿದ್ದಾನೆ.

## ದಾಖಲೆಯ ಹಾರಾಟ

ಬಿಸಿಗಾಳಿ ಬಲೂನಿನಲ್ಲಿ ಸುಮಾರು 70,000 ಅಡಿ ಎತ್ತರಕ್ಕೆ ಹಾರಿ ಕ್ಷೇಮವಾಗಿ ಹಿಂದಿರುಗಿ ಬಂದಿರುವ ದಾಖಲೆ ಮುಂಬೈನ ಡಾ. ವಿಜಯ್ ಪಥ್ ಸಿಂಘಾನಿಯ (ಬಹಳ ಕಾಲ ರೇಮಂಡ್ ಸಂಸ್ಥೆಯ ಮುಖ್ಯಸ್ಥರಾಗಿದ್ದವರು) ಅವರದ್ದು. ಇದು ಇಂದಿಗೂ ವಿಶ್ವ ದಾಖಲೆಯಾಗಿಯೇ ಉಳಿದಿದೆ.

ಹಿಮಾಲಯದ ಎವರೆಸ್ಟ್ ಶಿಖರದ ಮೇಲೆ ಮೊದಲು ಹಾರಾಟ ನಡೆಸಿದ ಸಾಹಸಿಯ ಹೆಸರು ಕ್ರಿಸ್ ಡ್ಯೂಹರ್ಸ್ಟ್. ಈತ ನಿಮ್ಮನ್ನೂ ಅಲ್ಲಿಗೆ ಕರೆದುಕೊಂಡು ಹೋಗಲು ಸಿದ್ಧ. ಹಾಗೆಂದು ifonly.com ಜಾಲತಾಣದಲ್ಲಿ ಜಾಹೀರಾತು ನೀಡಿದ್ದಾನೆ. ಒಬ್ಬರಿಗೆ ಕೇವಲ 25 ಲಕ್ಷ ಡಾಲರ್‌ಗಳಂತೆ! ಹಣ, ಹುಚ್ಚು ಎರಡೂ ಇರುವವರು ಪ್ರಯತ್ನಿಸಬಹುದು.

ಲಂಡನ್ನಿನ ಒಂದು ಸಂಸ್ಥೆ ಕೇವಲ 30 ನಿಮಿಷಗಳಲ್ಲಿ ಗಾಳಿ ತುಂಬಿಸಿ ಸ್ಥಾಪಿಸಬಹುದಾದ ಥಿಯೇಟರ್ ಅನ್ನು ವಿನ್ಯಾಸಗೊಳಿಸಿದೆ. 350 ಕುರ್ಚಿಗಳನ್ನು ಹಾಕಬಹುದಾದ ಈ 'ಬಲೂನ್ ಥಿಯೇಟರ್'ಗೆ ಬೇಕಾಗಿರುವುದು 500 ಘನ ಮೀ. ಗಾಳಿ!

ಬಲೂನುಗಳದು ಒಂದು ರಮ್ಯ ಇತಿಹಾಸ. ಅದರ ಉಪಯೋಗಗಳು ವೈವಿಧ್ಯಮಯ. ಕೃತಕ ಉಪಗ್ರಹ, ಕಂಪ್ಯೂಟರ್‌ಗಳ ಯುಗದಲ್ಲೂ ಅವುಗಳ ಹಿರಿಮೆ ಕುಗ್ಗಿಲ್ಲ. ಕುಗ್ಗುವ ಲಕ್ಷಣಗಳೂ ಇಲ್ಲ. ಅದರ ಅನ್ವಯಗಳು ಮತ್ತಷ್ಟು ವಿಸ್ತಾರವಾಗಲಿವೆ.

ಪ್ರತಿಕ್ರಿಯಿಸಿ: feedback@sudha.co.in